# ಡೊನ್ನ ನೂಕ್

## ಸೀಲ್‌ಗಳ ಪ್ರಸೂತಿ ಗೃಹ

**ಕಡಲ ಕಿನಾರೆಯ ಮಗ್ಗುಲಲ್ಲಿರುವ 'ಡೊನ್ನ ನೂಕ್' ಎಂಬ ಪುಟ್ಟ ಹಳ್ಳಿ, ವರ್ಷದ ಕೊನೆಯಲ್ಲಿ ಸೀಲ್‌ಗಳ ಸಾಮ್ರಾಜ್ಯವಾಗಿ ಬದಲಾಗುತ್ತದೆ. ಮಕ್ಕಳನ್ನು ಹೆತ್ತು, ಪ್ರಸವ, ಬಾಣಂತನ, ಪ್ರಣಯ ಎಲ್ಲ ಮುಗಿಸಿಕೊಂಡು ಹೋಗಲು ಸಾವಿರಾರು ಸೀಲ್‌ಗಳು ಇಲ್ಲಿಗೆ ಬಂದು ಬಿಡಾರ ಹೂಡುತ್ತವೆ. ಇವುಗಳ 'ಸಂಸಾರ ಸಂತೆ' ನೋಡಲೆಂದೇ ಜನ ಇಲ್ಲಿ ದೌಡಾಯಿಸುತ್ತಾರೆ.**

**■ ಡಾ. ಪ್ರೇಮಲತ ಬಿ.**



ನವೆಂಬರ್ ಮತ್ತು ಡಿಸೆಂಬರ್ ತಿಂಗಳ ಕಡು ಚಳಿಗಾಲದಲ್ಲಿ, ಇಂಗ್ಲೆಂಡಿನ ಲಿಂಕನ್ ಕೌಂಟಿಯ ಮೇಬಲ್ ತೋರ್ಪ್ ಎನ್ನುವ ಬೀಚಿನತ್ತ ದಿನವೂ ನೂರಾರು ಕಾರುಗಳು ಪ್ರಯಾಣ ಬೆಳೆಸುತ್ತವೆ. ಥರಗುಟ್ಟಿಸುವ ಚಳಿಯನ್ನು ಲೆಕ್ಕಿಸದೆ, ಬದುಕನ್ನು ಪ್ರೀತಿಸುವ ಎಲ್ಲ ವರ್ಗದ ಜನರು ಹೀಗೆ ದೌಡಾಯಿಸುವುದು, ಅಲ್ಲಿ ನಡೆಯುವ ಒಂದು ಪ್ರಾಕೃತಿಕ ವಿಸ್ಮಯವನ್ನು ಕಣ್ತುಂಬಿಕೊಳ್ಳಲು.

'ಡೊನ್ನ ನೂಕ್' ಎನ್ನುವುದು ಮೇಬಲ್ ತೋರ್ಪ್ ಬೀಚಿನ ತಟದಲ್ಲಿರುವ ಒಂದು ಪುಟ್ಟ ಹಳ್ಳಿ. ಈ ಹಳ್ಳಿಗೆ ಹೊಂದಿಕೊಂಡಿರುವ ಸಮುದ್ರ ತಟಕ್ಕೆ, ಈ ತಿಂಗಳುಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಬೂದು ಬಣ್ಣದ ವಿಶೇಷ ಅತಿಥಿಗಳು ಆಗಮಿಸುತ್ತಾರೆ. 8–10 ತಿಂಗಳುಗಳ ಕಾಲ ಇಲ್ಲಿಯೇ ಇದ್ದು, ಮಕ್ಕಳನ್ನು ಹೆತ್ತು, ಪ್ರಸವ, ಬಾಣಂತನ, ಪ್ರಣಯ ಎಲ್ಲ ಮುಗಿಸಿಕೊಂಡು ಕಡಲಿಗೆ ಮರಳುವ ವೇಳೆಗೆ ಅವರ ಸಂಖ್ಯೆ ದುಪ್ಪಟ್ಟಾಗಿರುತ್ತದೆ.

ಪ್ರಕೃತಿಯಲ್ಲಿ ಒತ್ತಟ್ಟಿಗೆ ನಡೆಯುವ ಈ ಸಂತಾನೋತ್ಪತ್ತಿಯ ಸಂಭ್ರಮದ ಸಂತೆಯನ್ನು, ಸುರಕ್ಷಿತವಾಗಿ ನಡೆಯುವಂತೆ ನೋಡಿಕೊಳ್ಳಲು ನೂರಾರು ಸ್ಥಳೀಯರು ಟೊಂಕಕಟ್ಟಿ ನಿಲ್ಲುತ್ತಾರೆ.

ಇಷ್ಟಾಗಿ, ಡೊನ್ನ ನೂಕ್ ಕಿನಾರೆ, ಸಾರ್ವಜನಿಕರಿಗಾಗಿ ಯಾವುದೇ ಆಧುನಿಕ ಸೌಲಭ್ಯಗಳಿಲ್ಲದ ಹತ್ತು ಕಿ.ಮೀ. ಉದ್ದದ ಮರಳು ಮತ್ತು ಹುಲ್ಲು ತುಂಬಿದ ಸಮುದ್ರ ತಟ. ಈ ಬೀಚಿನ ಸುತ್ತ ಒಂದು ಏರು ದಿಬ್ಬವಿದೆ. ಅದರ ತಗ್ಗಿನಲ್ಲಿ ಸಮತಟ್ಟಾದ ಜಾಗದಲ್ಲಿ ಹರಡಿದಂತೆ ಸಮುದ್ರ ಕಾಣಸಿಗುತ್ತದೆ. ದಿಬ್ಬದ ಆಚೆ ಕಾರುಗಳನ್ನು ನಿಲ್ಲಿಸಿ ಇನ್ನೊಂದು ಕಡೆಗೆ ಹತ್ತಿಳಿದರೆ ಅಲ್ಲಿ ಸಾವಿರಾರು ಸಂಖ್ಯೆಯಲ್ಲಿ ಬೂದು ಬಣ್ಣದ ಸಮುದ್ರ ಸೀಲ್‌ಗಳು ತಮ್ಮ ಅರೆಕಾಲಿಕ ಸಾಮ್ರಾಜ್ಯ ಹರಡಿಕೊಂಡಿರುವುದು ಕಂಡುಬರುತ್ತದೆ.

ಪ್ರತಿ ವರ್ಷ ನವೆಂಬರ್ ಮತ್ತು ಡಿಸೆಂಬರ್ ವೇಳೆಗೆ, ಸಮುದ್ರದಿಂದ ಈ ದಂಡೆಗೆ ಲಗ್ಗೆಯಿಡುವ ಸೀಲ್‌ಗಳು ಇಲ್ಲಿ ಸಾಮೂಹಿಕವಾಗಿ ಪ್ರಸವ ಕ್ರಿಯೆಯಲ್ಲಿ ತೊಡಗಿಕೊಳ್ಳುತ್ತವೆ. ಗರ್ಭ ಹೊತ್ತ ಸೀಲ್‌ಗಳು ಈ ಸಮುದ್ರ ದಂಡೆಯನ್ನು ಹೆರುವ ಸ್ಥಳವಾಗಿಯೂ, ಹುಟ್ಟಿದ ಮರಿಗಳ ಲಾಲನೆ ಪಾಲನೆಗಾಗಿ ಬಾಣಂತಿ ಕೋಣೆಯಂತೆಯೂ ಬಳಸಿಕೊಂಡು, ಮರಿಗಳನ್ನು ಬೀಚಿನಲ್ಲಿಯೇ ಬಿಟ್ಟು ಹೊರಟು ಹೋಗುತ್ತವೆ. ಮರಿಗಳು ಮತ್ತೂ ಒಂದೆರಡು ವಾರಗಳ ಕಾಲ ಇಲ್ಲಿರುತ್ತವೆ. ಈ ಮರಿಗಳಿಗೆ ದಂಡೆಯಲ್ಲಿ ತಿನ್ನಲು ಏನೂ ಸಿಗುವುದಿಲ್ಲ. ಹುಟ್ಟುವ ಮರಿಗಳ ಬಾಯಲ್ಲಿ ಹಲ್ಲಿನ್ನೂ ಮೊಳೆತಿರುವುದಿಲ್ಲ. ಸಮುದ್ರಕ್ಕಿಳಿದು ಮೀನುಗಳ ಬೇಟೆಯಾಡುವುದು ಕೂಡ ಗೊತ್ತಿರುವುದಿಲ್ಲ.

ಆದರೆ, ಮರಿಗಳು ಹುಟ್ಟಿದ ನಂತರ ಅಮ್ಮಂದಿರು ಅವಕ್ಕೆ ಕೊಬ್ಬು ಮತ್ತು ಪೋಷಕಾಂಶಗಳು ಹೇರಳವಾಗಿರುವ ಹಾಲಿನ ಸ್ತನಪಾನ ಮಾಡಿಸಿರುತ್ತವೆ. ಜೊತೆಗೆ ಮರಿಗಳು ಹುಟ್ಟುವಾಗಲೇ ಅಮ್ಮಂದಿರ ಕಾಲುಭಾಗ ಅಥವಾ ಮೂರನೇ ಒಂದು ಭಾಗ ತೂಗುತ್ತಿರುತ್ತವೆ. ಹಾಗಾಗಿ ಅವುಗಳ ಬ್ಲಬ್ಬರಿನಲ್ಲಿರುವ ಕೊಬ್ಬಿನ ಸಹಾಯದಿಂದಲೇ ಮರಿಗಳು ಕೆಲವು ವಾರಗಳ ಕಾಲ ಬದುಕಬಲ್ಲವು. ನಂತರ ಅವು ಸಮುದ್ರಕ್ಕೆ ಮರಳಿದಾಗ ಮೀನುಗಳ ಬೇಟೆಯನ್ನು ತಾವಾಗಿಯೇ ಕಲಿಯುತ್ತವೆ.

ಸೀಲ್‌ಗಳು ಮರಿಗಳಿಗೆ ಉಣಿಸುವ ಹಾಲಿನಲ್ಲಿ ಶೇ.52ರಷ್ಟು ಕೊಬ್ಬು, ಶೇ.11ರಷ್ಟು ಪ್ರೊಟೀನುಗಳಿದ್ದು ನೀರಿನಂಶ ಅತ್ಯಂತ

